ದಿನಾಂಕ 03–02–2020 ರಂದು ಸಾಕ್ಷಿಧಾರರನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.
: ಪಾಟೀ ಸವಾಲುಃ ವಾದಿ ಪರ ವಕೀಲರಿಂದ :

ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಖಾಯಂ ಆಗಿ ನೀರಲಗಿ ಗ್ರಾಮದಲ್ಲಿ ವಾಸವಾಗಿದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರ ಮತ್ತು ಪ್ರತಿವಾದ ಪತ್ರಗಳಲ್ಲಿ ಏನು ಬರೆದಿದೆ ಅಂತಾ ನನಗೆ ಗೊತ್ತಿಲ್ಲಾ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದ 3 ನೇ ಖಂಡಿಕೆಯಲ್ಲಿ ದಾವಾ–2 ಬಿ ದಿಂದ ಡಿ ಆಸ್ತಿಗಳು ಸರ್ವೆ ನಂಬರುಗಳು ನನಗೆ ಗೊತ್ತಿಲ್ಲಾ. ನಾನು ದಾವಾ ಆಸ್ತಿಗಳ ಪೈಕಿ ಒಂದನ್ನು ಖರೀದಿಸಿದ್ದೇನೆ ನಾನು ಖರೀದಿಸಿದ ದಾವಾ ಆಸ್ತಿಯ ಸರ್ವೆ ನಂ.56/5 ಇರುತ್ತದೆ. ನಾನು ಸದರಿ ಆಸ್ತಿಯನ್ನು ಖರೀದಿಸುವ ಕಾಲಕ್ಕೆ ಅದರ ಸರ್ವೆ ನಂಬರ ಇದ್ದು ಎಷ್ಟನೇ ಪೋಡ ಅಂತಾ ನನಗೆ ನೆನಪಿಲ್ಲಾ. ಕಾಲ ಕಾಲಕ್ಕೆ ಪೋಡಿ ಆದಾಗ ಹಿಸ್ಸಾ ನಂಬರುಗಳು ಬದಲಾವಣೆಯಾಗುತ್ತವೆ ಅಂದರೆ ನಿಜ. ಈ ದಾವಾ ದಾಖಲಿಸುವ ಕಾಲಕ್ಕೆ ನಾನು ಖರೀದಿಸಿದ ಆಸ್ತಿಯ ಸರ್ವೆ ನಂ.56/7 ಇತ್ತು ಅಂದರೆ ನಿಜ. ದಾವಾ–2 ಬಿ ಮತ್ತು 2 ಡಿ ಆಸ್ತಿಗಳನ್ನು ಯಾರು ಖರೀದಿಸಿದ್ದಾರೆ ಅಂತಾ ನನಗೆ ಗೊತ್ತಿಲ್ಲಾ. ಸದರಿ ಖರೀದಿದಾರರು ನನ್ನ ಸಂಬಂಧಿಕರಾಗಿರುವುದಿಲ್ಲಾ. ದಾವಾ–2 ಬಿ ಮತ್ತು 2 ಡಿ ಆಸ್ತಿಗಳನ್ನು ಖರೀದಿಸಿದ ಖರೀದಿದಾರರಿಗೂ ಮತ್ತು ನನಗೂ ಯಾವುದೇ ವೈಯಕ್ತಿಕ ಹಿತಾಸಕ್ತಿ ಇರುವುದಿಲ್ಲಾ.

ನಾನು ವಾದಿಯರು ಸಲ್ಲಿಸಿದ ದಾವೆಯ ಬಗ್ಗೆ ವಕೀಲರಿಂದ ಕೇಳಿ ತಿಳಿದುಕೊಂಡಿದ್ದೇನೆ. ನನಗೆ ವಾದಿಯರು ಸಲ್ಲಿಸಿದ ದಾವಾ ಆಸ್ತಿಗಳ ಚೆಕಬಂಧಿಗಳ ಪೈಕಿ ನನ್ನ ಆಸ್ತಿಯ ಚೆಕಬಂಧಿ ಮಾತ್ರ ನನಗೆ ಗೊತ್ತಿದೆ ಅದು ಸರಿಯಾಗಿದೆ. ನಾನು 1 ನೇ ಪ್ರತಿವಾದಿಯಿಂದ ದಾವಾ–2 ಸಿ ಆಸ್ತಿಯನ್ನು ಖರೀದಿಸುವಾಗ 1 ನೇ ಪ್ರತಿವಾದಿಗೆ ಎಷ್ಟು ಸಂಬಳ ಬರುತ್ತಿತ್ತು ಅಂತಾ ನನಗೆ ಗೊತ್ತಿಲ್ಲಾ. ವಾದಿಯರು ಕುಟುಂಬಕ್ಕೆ ಎರಡೂವರೆ ಎಕರೆ ಶೇತ್ಕಿ ಜಮೀನು ಇದೆ. ವಾದಿಯರು ತಮ್ಮ ಕುಟುಂಬದ ಸಲುವಾಗಿ ದುಡಿಮೆ ಮಾಡುತ್ತಾರೆ. ವಾದಿಯರ ಪಿತ್ರಾರ್ಜಿತ ಆಸ್ತಿ ಎರಡೂವರೆ ಎಕರೆ ಜಮೀನಿನ ಪಕ್ಕದಲ್ಲಿ ಹಳ್ಳ ಇದ್ದು ಸಾಕಷ್ಟು ನೀರು ಹರಿಯುತ್ತಿದೆ ಅಂದರೆ ಸರಿಯಲ್ಲಾ. ಈರೆಗೂ ಹಳ್ಳದಲ್ಲಿ ನೀರು ಬಂರಲಿಲ್ಲ. ಈ ಬಾರಿ ಬಹಳ ಮಳೆಯಾಗಿದ್ದರಿಂದ ನೀರು ಬಂದಿರುತ್ತದೆ. ವಾದಿಯರು ನೀರಾವರಿಸೌಲಭ್ಯ ಪಡೆದು ವರ್ಷಕ್ಕೆ ಎರಡು ಬೆಳೆ

ಬೆಳೆಯುತ್ತಾರೆ ಅಂದರೆ ಸರಿಯಲ್ಲ. ಅವರು ಹಾವೇರಿಯಲ್ಲಿ ವಾಸವಾಗಿದ್ದಾರೆ. ರೈತರು ಬೇರೆ ಊರಿನಲ್ಲಿ ಇದ್ದುಕೊಂಡು ಜಮೀನುಗಳನ್ನು ಕೂಲಿ ಆಳುಗಳ ಸಹಾಯದಿಂದ ಸಾಗುವಳಿ ಮಾಡಿಸಬಹುದು. ವಾದಿಯರು ವ್ಯವಸಾಯ ಮಾಡುವುದಿಲ್ಲಾ, ಬೇರೆಯವರಿಗೆ ಲಾವಣಿ ತರೀಖ ಕೊಡುತ್ತಾರೆ. ರಮೇಶ ಚೆಲ್ಲಾಳ ಎನ್ನುವವರು ವಾದಿಯರು ವ್ಯವಸಾಯ ಮಾಡಲು ಲಾವಣಿ ತರೀಖ ಕೊಟ್ಟಿರುತ್ತಾರೆ ಆ ಬಗ್ಗೆ ನಾನು ಲಾವಣಿ ಪತ್ರವನ್ನು ನೋಡಿರುವುದಿಲ್ಲಾ ಮತ್ತು ವ್ಯವಹಾರದಲ್ಲಿ ಭಾಗವಹಿಸಿರುವುದಿಲ್ಲಾ. ರಮೇಶ ಚೆಲ್ಲಾಳ ಎನ್ನುವವರ ಕೃಷಿ ಸಲಕರಣೆಗಳ ಸಹಾಯದಿಂದ ವಾದಿಯರು ಜಮೀನು ಸಾಗುವಳಿ ಮಾಡಿಸುತ್ತಾರೆ ಅಂದರೆ ನಿಜ. ವಾದಿಯರಿಗೆ ಸಾಕಷ್ಟು ಕೃಷಿ ಉತ್ಪನ್ನ ಬರುತ್ತದೆ ಅಂದರೆ ನನಗೆ ಗೊತ್ತಿಲ್ಲಾ. 1 ನೇ ಪ್ರತಿವಾದಿಯು ಒಟ್ಟು ಕುಟುಂಬದ ಆದಾಯದಿಂದ ದಾವಾ-2 ಸಿ ಆಸ್ತಿಯನ್ನು ಖರೀದಿಸಿದ್ದಾರೆ ಅಂದರೆ ಸರಿಯಲ್ಲಾ. ಅವರು ಬ್ಯಾಂಕ್ ಉದ್ಯೋಗಿಯಾಗಿದ್ದು ಸ್ವಂತ ದುಡಿಮೆಯಿಂದ ಖರೀದಿಸಿದ್ದಾರೆ ಅಂತಾ ಸ್ವ-ಇಚ್ಚೆಯಿಂದ ಹೇಳುತ್ತಾರೆ. ದಾವಾ-2 ಸಿ ಆಸ್ತಿಯನ್ನು ಖರೀದಿಸುವ ಕಾಲಕ್ಕೆ 1 ನೇ ಪ್ರತಿವಾದಿ ಯಾವ ಊರಿನಲ್ಲಿ ನೌಕರಿ ಮಾಡುತ್ತಿದ್ದರು ಅಂತಾ ನನಗೆ ಗೊತ್ತಿಲ್ಲಾ. ಆ ಕಾಲಕ್ಕೆ ಬಿಜಾಪುರದಲ್ಲಿ ಇದ್ದರು ಅಂದರೆ ನನಗೆ ಗೊತ್ತಿಲ್ಲಾ. 1 ನೇ ಪ್ರತಿವಾದಿ ಬಿಜಾಪುರಲ್ಲಿ ಕೆಲಸ ಮಾಡುತ್ತಿದ್ದಾಗ ಅವರ ವೇತನ ಅವರ ಕುಟುಂಬದ ನಿರ್ವಹಣೆಗೆ ಮಾತ್ರ ಸಾಕಾಗುತ್ತಿತ್ತು ಅಂದರೆ ನನಗೆ ಗೊತ್ತಿಲ್ಲಾ. 1 ನೇ ಪ್ರತಿವಾದಿ ದುಶ್ಚಟಗಳ ಖರ್ಚಿಗಾಗಿ ಮತ್ತು ಕುಟುಂಬದ ನಿರ್ವಹಣೆ ಮಾಡಿ ಯಾವುದೇ ಹಣ ಉಳಿಸುತ್ತಿರಲಿಲ್ಲ ಅಂದರೆ ನನಗೆ ಗೊತ್ತಿಲ್ಲಾ. 1 ನೇ ಪ್ರತಿವಾದಿ ತನ್ನ ನೌಕರಿಯಿಂದ ಬರುವ ವೇತದಿಂದ ಖರೀದಿಸಿದ್ದಾರೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತೇನೆ ಅಂದರೆ ಸರಿಯಲ್ಲಾ. 1 ನೇ ಪ್ರತಿವಾದಿ ನೀರಲಗಿ ಗ್ರಾಮದಲ್ಲಿ ಎಷ್ಟು ವರ್ಷಗಳಿಂದ ವಾಸವಾಗಿದ್ದರು ಅಂತಾ ನನಗೆ ನೆನಪಿಲ್ಲಾ. 1 ನೇ ಪ್ರತಿವಾದಿ ನೀರಲಗಿ ಗ್ರಾಮದಲ್ಲಿ ಖಾಯಂ ಆಗಿ ವಾಸವಾಗಿರಲಿಲ್ಲ. ಆದರೆ ಬಂದು ಹೋಗಿ ಮಾಡುತ್ತಿದ್ದರು. ಯಾವುದೇ ವ್ಯಕ್ತಿ ದೂರದಲ್ಲಿ ವಾಸವಾಗಿದ್ದಾಗ ಯಾವ ರೀತಿ ದುಶ್ಚಟ ಮಾಡುತ್ತಾನೆ, ಯಾವ ರೀತಿ ಖರ್ಚು ಮಾಡುತ್ತಾನೆ ಅಂತಾ ಗೊತ್ತಾಗುವುದಿಲ್ಲಾ ಅಂದರೆ ನಿಜ. 2002-03 ರಲ್ಲಿ 1 ನೇ ಪ್ರತಿವಾದಿ ಬ್ಯಾಂಕ್ ಸಾಲ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಣಕಾಸಿನ ಅಡಚಣೆ ಇತ್ತು. 1 ನೇ ಪ್ರತಿವಾದಿ ಬ್ಯಾಂಕಿನಿಂದ ಎಷ್ಟು ಸಾಲ ಪಡೆದಿದ್ದರು ಅಂತಾ ನಾನು

ವಿಚಾರಣೆ ಮಾಡಿಲ್ಲಾ. 1 ನೇ ಪ್ರತಿವಾದಿ ಯಾರಿಂದ ಎಷ್ಟು ಹಣ ಕೈಗಡ ಸಾಲ ಪಡೆದಿದ್ದಾ ಅಂತಾ ನನಗೀಗ ನೆನಪಿಲ್ಲಾ. 1 ನೇ ಪ್ರತಿವಾದಿ ನೀರಲಗಿ ಗಾಮದವರಿಂದ ಸಾಲ ಪಡೆಯುತ್ತಿದ್ದನು. ನೀರಲಗಿ ಗ್ರಾಮದ ಯಾವ ಯಾವ ವ್ಯಕ್ತಿಗಳಿಂದ ಸಾಲ ಪಡೆದಿದ್ದ ಅಂತಾ ನನಗೆ ಗೊತ್ತಿಲ್ಲಾ. ನೀರಲಗಿ ಗ್ರಾಮದ ವ್ಯಕ್ತಿಗಳು ಬಡ್ಡಿ ವ್ಯವಹಾರ ಮಾಡುತ್ತಿದ್ದ ಅಂತಾ ನನಗೆ ಗೊತ್ತಿಲ್ಲಾ. ಅವರು ಯಾವ ಯಾವ ವ್ಯಕ್ತಿಗಳಿಂದ ಸಾಲ ಪಡೆಯುತ್ತಿದ್ದ ಅಂತಾ ನನಗೆ ಗೊತ್ತಿಲ್ಲಾ. ನಾನು ದಾವಾ-2 ಸಿ ಆಸ್ತಿಯನ್ನು ಖರೀಸುವ ಮೊದಲು ಯಾವುದೇ ಪೇಪರ ಪ್ರಕಟಣೆಯನ್ನು ಹೊರಡಿಸಿರುವುದಿಲ್ಲಾ. ನಾನು ಜಮೀನು ಖರೀದಿಸಬೇಕಾಗಿದೆ ಅಂತಾ ಪೇಪರ ಪ್ರಕರಣ ಹೂರಡಿಸಿರಲಿಲ್ಲ, ಆದರೆ 1 ನೇ ಪ್ರತಿವಾದಿ ರಜೆ ದಿನಗಳಲ್ಲಿ ಊರಿಗೆ ಬಂದಾಗ ದಾವಾ ಆಸ್ತಿಯನ್ನು ಮಾರಾಟ ಮಾಡುತ್ತೇನೆ ಅಂತಾ ತಿಳಿಸಿದ್ದರು. 2002-03 ನೇ ಸಾಲಿನಲ್ಲಿ ನಮ್ಮ ಊರಿನಲ್ಲಿ 01 ಎಕರೆಗೆ 30000/- ರಿಂದ 40000/- ಮಾರುಕಟ್ಟೆ ಮೌಲ್ಯ ಇತ್ತು. 2002-03 ನೇ ಸಾಲಿನಲ್ಲಿ ನಮ್ಮ ಊರಿನಲ್ಲಿ 01 ಎಕರೆಗೆ 400000/- ರಿಂದ 500000/- ಮಾರುಕಟ್ಟೆ ಬೆಲೆ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತೇನೆ ಅಂದರೆ ಸರಿಯಲ್ಲಾ. ನಮ್ಮ ಊರಿನಲ್ಲಿ ಈಗಲೂ ಒಂದು ಎಕರೆಗೆ ರೂ.15,00,000/- ರಿಂದ 16,00,000/- ರೂ ಮಾರುಕಟ್ಟೆ ಮೌಲ್ಯ ಇದೆ ಅಂದರೆ ಸರಿಯಲ್ಲ. ರೂ.8,00,000/- ರಿಂದ 9,00,000- ರೂ ಮಾರುಕಟ್ಟೆ ಮೌಲ್ಯ ಇರಬಹುದು ಅಂತಾ ಸಾಕ್ಷಿ ಸ್ವತ ಹೇಳುತ್ತಾರೆ.

ನಾನು ದಾವಾ-2 ಸಿ ಆಸ್ತಿಯನ್ನು ಖರೀದಿಸುವ ಕಾಲಕ್ಕೆ ಉತಾರೆಯನ್ನು ನೋಡಿದ್ದೇನೆ. ನಾನು ದಾವಾ-2 ಸಿ ಆಸ್ತಿಯನ್ನು ಖರೀದಿಸುವ ಕಾಲಕ್ಕೆ ವಕೀಲರಿಗೆ ದಾಖಲೆಗಳನ್ನು ತೋರಿಸಿ ಅವರಿಂದ ಸಲಹೆ ಪಡೆದಿರುವುದಿಲ್ಲಾ. 1 ನೇ ಪ್ರತಿವಾದಿಯ ಹೆಂಡತಿ ಮಕ್ಕಳ ಪರಿಚಯ ಇರಲಿಲ್ಲ. ಅವರ ಮಕ್ಕಳು ಚಿಕ್ಕವರಿದ್ದರು. 1 ನೇ ಪ್ರತಿವಾದಿಯ ಹೆಂಡತಿಯನ್ನು ನಮ್ಮ ಸಹೋದರರು ಹೋಗಿ ವಿಚಾರ ಮಾಡಿದ್ದಾರೆ. ವೈಯಕ್ತಿಕವಾಗಿ ನಾನು ವಿಚಾರ ಮಾಡಿಲ್ಲ. 1 ನೇ ಪ್ರತಿವಾದಿಯು ಮಾರಾಟ ಮಾಡಿದ ಹಣವನ್ನು ಬ್ಯಾಂಕ್ ಸಾಲ ಮರುಪಾವತಿ ಮಾಡಿಲ್ಲಾ ಅಂದರೆ ಸರಿಯಲ್ಲಾ. 1 ನೇ ಪ್ರತಿವಾದಿಯು ದಾವಾ-2 ಸಿ ಆಸ್ತಿಯನ್ನು ಮಾರಾಟ ಮಾಡಿ ಬಂದ ಹಣದಿಂದ ಬ್ಯಾಂಕ್ ಸಾಲ ತೀರಿಸಿದ್ದಾರೆ ಅಂತಾ ತೋರಿಸಲು ಯಾವುದೇ ದಾಖಲೆ

ಹಾಜರು ಮಾಡಿಲ್ಲಾ. 1 ನೇ ಪ್ರತಿವಾದಿಗೆ ನಾವು ಕ್ರಯದ ಮೌಲ್ಯ ಕೊಟ್ಟ ನಂತರ ಬ್ಯಾಂಕ್ ಗೆ ಸಾಲ ಮರುಪಾವತಿ ಮಾಡಿ ಬಂದ ನಂತರ ನನಗೆ ನೊಂದಾಯಿತ ಕ್ರಯ ಪತ್ರ ಬರೆದುಕೊಟ್ಟಿದ್ದಾರೆ. ನಾನು ಕ್ರಯದ ಮೌಲ್ಯವನ್ನು ಸಬ್ ರಜಿಸ್ಟ್ರಾರ್ನಲ್ಲಿ ಕೊಟ್ಟಿದ್ದೇನೆ 1 ನೇ ಪ್ರತಿವಾದಿಗೆ ನರೇಗಲ್ ಗ್ರಾಮದ ಎಂ ಜಿ ಬ್ಯಾಂಕಿನಲ್ಲಿ ಸಾಲ ಇತ್ತು. ನೊಂದಣಿ ಮಾಡುವ ಪೂರ್ವದಲ್ಲಿ 1 ನೇ ಪ್ರತಿವಾದಿಗೆ ಕ್ರಯದ ಮೌಲ್ಯ ಕೊಟ್ಟಿದ್ದೆನು. 1 ನೇ ಪ್ರತಿವಾದಿಯ ಕುಟುಂಬಕ್ಕೆ ಕಾರು, ಬೈಕು ಆತ ಇದ್ದ ಬಗ್ಗೆ ದಾಖಲೆಗಳನ್ನು ಕೊಟ್ಟಿದ್ದೀರಾ ಅಂದರೆ ಸಾಕ್ಷಿಯು ನಾನು ಕಾರು ಬೈಕುಗಳ ಬಗ್ಗೆ ಕೊಟ್ಟಿಲ್ಲಾ. ಆದರೆ ಹಾವೇರಿ ಜಾಗೆಯ ಬಗ್ಗೆ ಕೊಟ್ಟಿದ್ದೇನೆ. 1 ನೇ ಪ್ರತಿವಾದಿ ಯಾರಿಂದ ಯಾವಾಗ ಹಾವೇರಿ ಜಾಗೆ ಖರೀದಿಸಿದ್ದಾರೆ ಅಂತಾ ನನಗೆ ಗೊತ್ತಿಲ್ಲಾ. ಹಾವೇರಿಯಲ್ಲಿ ಇರುವ ಜಾಗೆಯನ್ನು 1 ನೇ ಪ್ರತಿವಾದಿ ತನ್ನ ಸ್ವಂತ ದುಡಿಮೆಯಿಂದ ಖರೀದಿಸಿದ್ದಾನೆ ಅಂದರೆ ನನಗೆ ಗೊತ್ತಿಲ್ಲಾ. ನನಗೆ ಅವಶ್ಯಕ ಪಕ್ಷಗಾರರು ಮತ್ತು ಅವಶ್ಯಕ ಆಸ್ತಿಗಳು ಅಂದರೆ ಏನು ಅಂತಾ ನನಗೆ ಗೊತ್ತಿಲ್ಲಾ. ನಾನು ಖರೀದಿಸಿದ ಆಸ್ತಿಯ ಮೂಲ ಖರೀದಿ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಲು ಯಾವುದೇ ತೊಂದರೆ ಇರುವುದಿಲ್ಲಾ. ನಾನು ಮೂಲ ಕ್ರಯ ಪತ್ರವನ್ನು ಹಾಜರು ಮಾಡಿರುವುದಿಲ್ಲಾ ದೃಡೀಕರಣ ಪತ್ರ ಹಾಜರು ಮಾಡುತ್ತೇನೆ ಅಂತಾ ನ್ಯಾಯಾಲಯದ ಪರವಾನಿಗೆ ಪಡೆದಿರುವುದಿಲ್ಲಾ. ದಾವಾ ಆಸ್ತಿಗಳು ವಾದಿಯರ ಒಟ್ಟು ಕುಟುಂಬದ ಆಸ್ತಿಗಳು ಅಂದರೆ ಸರಿಯಲ್ಲಾ. 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಅಂತಾ ಸುಳ್ಳು ಸಾಕ್ಷಿ ಹೇಳುತ್ತೇನೆ ಅಂದರೆ ಸರಿಯಲ್ಲಾ. ನಾನು 1 ನೇ ಪ್ರತಿವಾದಿಯ ದುಶ್ಚಟಗಳ ದುರಪಯೋಗಪಡಿಸಿ ಕೊಂಡು ಅತೀ ಕಡಿಮೆ ಬೆಲೆಗೆ ಕ್ರಯ ಪತ್ರ ಬರೆಸಿಕೊಂಡಿದ್ದೇನೆ ಅಂದರೆ ಸರಿಯಲ್ಲಾ. ದಾವಾ–2 ಸಿ ಆಸ್ತಿಯ ಕ್ರಯ ಪತ್ರವು ವಾದಿಯರ ಹಕ್ಕಿಗೆ ಯಾವುದೇ ರೀತಿಯಿಂದ ಬಂಧನಕಾರಿಯಾಗುವುದಿಲ್ಲಾ ಅಂದರೆ ಸರಿಯಲ್ಲಾ.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ